# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

ವಿಶೇಷ ರಾಜ್ಯ ಪತ್ರಿಕೆ

| ಭಾಗ–೪ಎ<br>Part – IVA | ಬೆಂಗಳೂರು, ಗುರುವಾರ, ೧೧, ಡಿಸೆಂಬರ್,೨೦೨೫ ( ಮಾರ್ಗಶಿರಾ,೨೦, ಶಕವರ್ಷ, ೧೯೪೭)<br>BENGALURU, THURSDAY, 11, DECEMBER, 2025 (MARGASHIRA, 20, SHAKAVARSHA, 1947) | ನಂ.೮೦೭<br>No. 807 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಎಂಟನೇ ಅಧಿವೇಶನ**

## ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–81)**

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ ಸಂ.36)ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ ಸಂ.36)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 9ರ ತಿದ್ದುಪಡಿ.-** ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರಲ್ಲಿನ 9ನೇ ಪ್ರಕರಣದಲ್ಲಿ,-

(i) ಉಪಪ್ರಕರಣ (3)ರ (ಡಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ-1) ಸರ್ಕಾರದ ಮುಖ್ಯ ಕಾರ್ಯದರ್ಶಿ - ಪದನಿಮಿತ್ತ ಸದಸ್ಯ.

(ಡಿ-2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ – ಪದನಿಮಿತ್ತ ಸದಸ್ಯ.

(ಡಿ-3) ಸರ್ಕಾರ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ- ಪದನಿಮಿತ್ತ

ಸದಸ್ಯ."

(ii) ಉಪಪ್ರಕರಣ (5)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(5) ಈ ಮುಂದಿನವರೂ ಸಹ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸದಸ್ಯರಾಗಿರತಕ್ಕದ್ದು, ಎಂದರೆ:-

(i) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರದೇಶದೊಳಗೆ ಮತಕ್ಷೇತ್ರ ಅಥವಾ ಭಾಗಶಃ ಮತಕ್ಷೇತ್ರವು ಬರುವ ಎಲ್ಲಾ ಚುನಾಯಿತ ಲೋಕಸಭಾ ಸದಸ್ಯರು ಮತ್ತು ರಾಜ್ಯ ವಿಧಾನಸಭಾ ಸದಸ್ಯರು.

(ii) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರದೇಶದೊಳಗೆ ವಾಸಿಸುವ ಮತ್ತು ಕರ್ನಾಟಕ ವಿಧಾನ ಸಭೆಯ ಸದಸ್ಯರ ಮೂಲಕ ಚುನಾಯಿತರಾದ ಮತ್ತು ಅದರೊಳಗೆ ವಾಸಿಸುವ ಎಲ್ಲಾ ರಾಜ್ಯಸಭಾ ಸದಸ್ಯರು ಮತ್ತು ರಾಜ್ಯ ವಿಧಾನಪರಿಷತ್ತಿನ ಸದಸ್ಯರು.

(iii) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರದೇಶದೊಳಗೆ ಮತಕ್ಷೇತ್ರ ಅಥವಾ ಭಾಗಶಃ ಮತಕ್ಷೇತ್ರ ಬರುವ ಸ್ಥಳೀಯ ಪ್ರಾಧಿಕಾರಗಳ ಅಥವಾ ಪದವೀಧರರ ಕ್ಷೇತ್ರ ಅಥವಾ ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದ ಎಲ್ಲಾ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು.

(iv) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರದೇಶದೊಳಗಿನ ಮತದಾರ ಪಟ್ಟಿಯಲ್ಲಿ ಹೆಸರಿರುವ ಎಲ್ಲಾ ನಾಮನಿರ್ದೇಶಿತ ರಾಜ್ಯಸಭಾ ಸದಸ್ಯರು ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು."

**3. ಪ್ರಕರಣ 13ರ ತಿದ್ದುಪಡಿ.-** ಮೂಲ ಅಧಿನಿಯಮದ 13ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಎ) ಖಂಡದ ತರುವಾಯ ಈ ಮುಂದಿನ ಉಪಬಂಧವನ್ನು ಸೇರಿಸತಕ್ಕದ್ದು, ಎಂದರೆ:-

"(ಎ-1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ."

**4. ಪ್ರಕರಣ 29ರ ತಿದ್ದುಪಡಿ.-** ಮೂಲ ಅಧಿನಿಯಮದ 29ನೇ ಪ್ರಕರಣದ (5)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಹೊಸದಾಗಿ ಸೇರಿಸಲಾದ ಸ್ಥಳೀಯ ಪ್ರದೇಶಕ್ಕಾಗಿ ಪುನರ್‌ವಿಂಗಡಣೆಯನ್ನು ಮೂರು ತಿಂಗಳುಗಳ ಅವಧಿಯೊಳಗೆ ಮಾಡತಕ್ಕದ್ದು.

ಮತ್ತು ಪರಂತು, ನಗರಪಾಲಿಕೆಯ ಮುಂದಿನ ಸಾರ್ವತ್ರಿಕ ಚುನಾವಣೆಯ ಕನಿಷ್ಟ ಆರು ತಿಂಗಳ ಮೊದಲು ಜನಗಣತಿಯ ಫಲಿತಾಂಶಗಳು ಲಭ್ಯವಿದ್ದಲ್ಲಿ, ಪ್ರತಿ ಜನಗಣತಿಯ ತರುವಾಯ ನಗರಪಾಲಿಕೆಯ ಮುಂದಿನ ಸಾರ್ವತ್ರಿಕ ಚುನಾವಣೆಯ ಮೊದಲು ಹೊಸ ಪುನರ್‌ವಿಂಗಡಣೆ ಪ್ರಕ್ರಿಯೆಯನ್ನು ನಡೆಸತಕ್ಕದ್ದು."

**5. ಪ್ರಕರಣ 30ರ ತಿದ್ದುಪಡಿ.-** ಮೂಲ ಅಧಿನಿಯಮದ 30ನೇ ಪ್ರಕರಣದ (ಡಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಇ) ಸರ್ಕಾರವು ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಸೇರಿದಂಥ ಸ್ಥಳೀಯ ಪ್ರದೇಶದಲ್ಲಿ ಸಾಮಾನ್ಯ ನಿವಾಸಿಯನ್ನು, ಆ ಸ್ಥಳೀಯ ಪ್ರದೇಶಕ್ಕೆ ಚುನಾವಣೆ ನಡೆಸುವವರೆಗೆ ಪ್ರತಿ 20,000 ಜನಸಂಖ್ಯೆಗೆ ಕನಿಷ್ಠ ಒಬ್ಬ ವ್ಯಕ್ತಿಯಂತೆ ಆ ನಿರ್ದಿಷ್ಟ ನಗರಪಾಲಿಕೆಗೆ ಹೆಚ್ಚುವರಿ ಸದಸ್ಯನಾಗಿ ನಾಮನಿರ್ದೇಶಿಸತಕ್ಕದ್ದು:

ಮತ್ತು ಪರಂತು, ಅಂಥ ನಾಮನಿರ್ದೇಶಿತ ವ್ಯಕ್ತಿಯು ನಗರಪಾಲಿಕೆಯಲ್ಲಿ ಮತದಾನ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದಲ್ಲ."

**6. ಪ್ರಕರಣ 33ರ ತಿದ್ದುಪಡಿ.-** ಮೂಲ ಅಧಿನಿಯಮದ 33ನೇ ಪ್ರಕರಣದ (3)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

(4) ಹೊಸದಾಗಿ ಸೇರಿಸಲಾದ ಸ್ಥಳೀಯ ಪ್ರದೇಶಕ್ಕಾಗಿ ಪುನರ್‌ವಿಂಗಡಣೆಯ ತರುವಾಯ ಆ ಪ್ರದೇಶದ ಸೇರ್ಪಡೆಯ ದಿನಾಂಕದಿಂದ ಆರು ತಿಂಗಳುಗಳಿಗಿಂತ ತಡವಾಗದಂತೆ ಚುನಾವಣೆಯನ್ನು ನಡೆಸತಕ್ಕದ್ದು. ಹಾಗೆ ಚುನಾಯಿತನಾದ ವ್ಯಕ್ತಿಯು ಆ ಹೊಸದಾಗಿ ಸೇರಿಸಲಾದ ಸ್ಥಳೀಯ ಪ್ರದೇಶವನ್ನು ಆ ನಗರ ಪಾಲಿಕೆಯ ಉಳಿದ ಅವಧಿಯವರೆಗೆ ಮಾತ್ರ ಪದವನ್ನು ಹೊಂದಿರತಕ್ಕದ್ದು:

ಪರಂತು, ಆ ನಗರ ಪಾಲಿಕೆಯ ಸದಸ್ಯರ ಪದಾವಧಿಯು ಆರು ತಿಂಗಳುಗಳ ಅವಧಿಯೊಳಗೆ ಕೊನೆಗಳ್ಳುತ್ತಿದ್ದಲ್ಲಿ, ಹೊಸದಾಗಿ ಸೇರಿಸಲಾದ ಸ್ಥಳೀಯ ಪ್ರದೇಶಕ್ಕಾಗಿ ಚುನಾವಣೆಯನ್ನು ನಡೆಸತಕ್ಕದ್ದಲ್ಲ."

**7. ಪ್ರಕರಣ 95ರ ತಿದ್ದುಪಡಿ.-** ಮೂಲ ಅಧಿನಿಯಮದ 95ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಡಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಇ) ಪ್ರಕರಣ 30ರ (ಇ) ಖಂಡದನುಸಾರ ಸಂಬಂಧಪಟ್ಟ ನಗರ ಪಾಲಿಕೆಯ ಸದಸ್ಯನಾಗಿ ನಾಮನಿರ್ದೇಶಿಸಲಾದ ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಸೇರಿಸಲಾದ ಸ್ಥಳೀಯ ಪ್ರದೇಶದ ನಾಮನಿರ್ದೇಶಿತ ಸದಸ್ಯನು ಆತನ ಪದಾವಧಿಯವರೆಗೆ ಸಂಬಂಧಪಟ್ಟ ವಿಧಾನಸಭಾ ಮತಕ್ಷೇತ್ರ ಮಟ್ಟದ ಸಮಾಲೋಚನಾ ಮತ್ತು ಸಮನ್ವಯ ಸಮಿತಿಯ ನಾಮನಿರ್ದೇಶಿತ ಸದಸ್ಯನೆಂಬುದಾಗಿ ಭಾವಿಸತಕ್ಕದ್ದು."

**8. ಪ್ರಕರಣ 241ರ ತಿದ್ದುಪಡಿ.-** ಮೂಲ ಅಧಿನಿಯಮದ 241ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ,-

(i) "ಉಪವಿಧಿಗಳಲ್ಲಿ ಮನ್ನಿಸಬಹುದಾದ ಪರಿಮಿತಿಗಳೊಳಗೆ ಕಟ್ಟಡವನ್ನು ನಿರ್ಮಿಸಲಾಗಿದ್ದಲ್ಲಿ," ಎಂಬ ಪದಗಳಿಗೆ ಬದಲಾಗಿ "ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮನ್ನಿಸಬಹುದಾದ ಪರಿಮಿತಿಗಳೊಳಗೆ ಮತ್ತು ಸಂಯುಕ್ತ ಶುಲ್ಕದೊಂದಿಗೆ ಕಟ್ಟಡವನ್ನು ನಿರ್ಮಿಸಲಾಗಿದ್ದಲ್ಲಿ," ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36ನ್ನು ಈ ಮುಂದಿನವುಗಳಿಗಾಗಿ,-

(i) ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸದಸ್ಯರಾಗಿ ಲೋಕಸಭೆ, ರಾಜ್ಯಸಭೆ, ರಾಜ್ಯ ವಿಧಾನ ಸಭೆ ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಸೇರಿಸಲು;

(ii) ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಪದನಿಮಿತ್ತ ಸದಸ್ಯರುಗಳನ್ನಾಗಿ ಸರ್ಕಾರದ ಅಪರ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಮತ್ತು ಸರ್ಕಾರದ ಅಪರ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿ ಆರ್ಥಿಕ ಇಲಾಖೆ ಇವರನ್ನು ಸೇರಿಸಲು;

(iii) ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ ಸರ್ಕಾರದ ಅಪರ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಇವರನ್ನು ಸೇರಿಸಲು,

(iv) ಹೊಸದಾಗಿ ನಿಗಮಿತಗೊಳಿಸಲಾದ ಸ್ಥಳೀಯ ಪ್ರದೇಶಗಳ ಸಂಬಂಧದಲ್ಲಿ ವಾರ್ಡ್‌ಗಳ ಪುನರ್ ವಿಂಗಡಣೆಯನ್ನು ನಿರ್ದಿಷ್ಟ ಅವಧಿಯೊಳಗೆ ಕೈಗೊಳ್ಳುವುದಕ್ಕಾಗಿ ಉಪಬಂಧಿಸಲು;

(v) ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಹೊಸದಾಗಿ ಸೇರಿಸಲಾದ ಸ್ಥಳೀಯ ಪ್ರದೇಶಗಳಿಗಾಗಿ ಚುನಾವಣೆಗಳನ್ನು ನಡೆಸುವುದಕ್ಕೆ ಸ್ಪಷ್ಟತೆಯನ್ನು ನೀಡಲು;

(vi) ಈ ಅಧಿನಿಯಮದ 30 (ಇ) ಪ್ರಕರಣದಡಿ ನಾಮನಿರ್ದೇಶಿಸಲಾದ ಸದಸ್ಯರನ್ನು ಸಮನ್ವಯ ಸಮಿತಿಯ ಸದಸ್ಯರನ್ನಾಗಿ ಪರಿಗಣಿಸಲು;

-ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಡಿ.ಕೆ ಶಿವಕುಮಾರ್**
ಉಪ ಮುಖ್ಯಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ
## ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024
## (2025ರ ಕರ್ನಾಟಕ ಅಧಿನಿಯಮ 36)ರ ಉದ್ಧೃತ ಭಾಗ.

**XXX XXX XXX**

**9. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ರಚನೆ.-** (1) ಈ ಅಧಿನಿಯಮದ ಪ್ರಾರಂಭದ ದಿನಾಂಕದ ತರುವಾಯ, ಆದಷ್ಟು ಬೇಗನೆ ಸದರಿ ದಿನಾಂಕದಿಂದ 120 ದಿನಗಳೊಳಗೆ ಸರ್ಕಾರವು, ಅಧಿಸೂಚನೆಯ ಮೂಲಕ, ಗ್ರೇಟರ್ ಬೆಂಗಳೂರು ಪ್ರದೇಶಕ್ಕಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ತನ್ನ ಹೆಸರಿನಲ್ಲಿ ಸ್ವತ್ತುಗಳನ್ನು ಸೃಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಗ್ರೇಟರ್ ಬೆಂಗಳೂರು ಪ್ರಾಧಿಕಾರವು, ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಮುಖ್ಯಮಂತ್ರಿಗಳು - ಪದನಿಮಿತ್ತ ಅಧ್ಯಕ್ಷ;

(ಬಿ) ಬೆಂಗಳೂರು ಅಭಿವೃದ್ಧಿಯ ಮಂತ್ರಿ - ಉಪಾಧ್ಯಕ್ಷ;

(ಸಿ) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ವಿಧಾನಸಭಾ ಕ್ಷೇತ್ರಗಳನ್ನು ಪ್ರತಿನಿಧಿಸುವ ರಾಜ್ಯ ಸರ್ಕಾರದ ಮಂತ್ರಿ – ಪದನಿಮಿತ್ತ ಸದಸ್ಯರು;

(ಡಿ) ನಗರಾಭಿವೃಧ್ಧಿಯ ಪ್ರಭಾರದಲ್ಲಿರುವ ಮಂತ್ರಿ-ಪದನಿಮಿತ್ತ ಸದಸ್ಯ

(ಇ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ - ಪದನಿಮಿತ್ತ ಸದಸ್ಯ ಕಾರ್ಯದರ್ಶಿ

(ಎಫ್) ಗ್ರೇಟರ್ ಬೆಂಗಳೂರು ಪ್ರದೇಶದೊಳಗಿನ ನಗರ ಪಾಲಿಕೆಗಳ ಮಹಾಪೌರರು – ಪದನಿಮಿತ್ತ ಸದಸ್ಯರು;

(ಜಿ) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ - ಪದನಿಮಿತ್ತ ಸದಸ್ಯ;

(ಹೆಚ್) ಅಧ್ಯಕ್ಷ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ – ಪದನಿಮಿತ್ತ ಸದಸ್ಯ;

(ಐ) ವ್ಯವಸ್ಥಾಪಕ ನಿರ್ದೇಶಕ ಬೆಂಗಳೂರು ಮಹಾನಗರ ಸಾರಿಗೆ ನಿಗಮ - ಪದನಿಮಿತ್ತ ಸದಸ್ಯ;

(ಜೆ) ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ಮೆಟ್ರೋ ರೈಲು ನಿಗಮ – ಪದನಿಮಿತ್ತ ಸದಸ್ಯ;

(ಕೆ) ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ – ಪದನಿಮಿತ್ತ ಸದಸ್ಯ;

(ಎಲ್) ಕ್ಷೇತ್ರವ್ಯಾಪ್ತಿಯ ಕಂದಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು- ಪದನಿಮಿತ್ತ ಸದಸ್ಯ

(ಎಂ) ಪೊಲೀಸ್ ಆಯುಕ್ತ, ಬೆಂಗಳೂರು ನಗರ– ಪದನಿಮಿತ್ತ ಸದಸ್ಯ;

(ಎನ್) ಯಾವುದೇ ನಗರ ಪಾಲಿಕೆಗಳ ಭಾಗಶಃ ಅಥವಾ ಸಂಪೂರ್ಣ ಅಧಿಕಾರ ವ್ಯಾಪ್ತಿಯನ್ನುಳ್ಳ ಪೊಲೀಸ್ ಅಧೀಕ್ಷಕರು- ಪದನಿಮಿತ್ತ ಸದಸ್ಯ

(ಒ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ – ಪದನಿಮಿತ್ತ ಸದಸ್ಯ;

(ಪಿ) ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ – ಪದನಿಮಿತ್ತ ಸದಸ್ಯ;

(ಕ್ಯೂ) ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ – ಪದನಿಮಿತ್ತ ಸದಸ್ಯ;

(ಆರ್) ಮುಖ್ಯ ಅಭಿಯಂತರರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ - ಪದನಿಮಿತ್ತ ಸದಸ್ಯ; ಮತ್ತು

(ಎಸ್) ನಿರ್ದೇಶಕ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳು– ಪದನಿಮಿತ್ತ ಸದಸ್ಯ.

(ಟಿ) ಆಯುಕ್ತರು, ನಗರ ಭೂಸಾರಿಗೆ ನಿರ್ದೇಶನಾಲಯ – ಪದನಿಮಿತ್ತ ಸದಸ್ಯ;

(ಯು) ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ– ಪದನಿಮಿತ್ತ ಸದಸ್ಯ.

(4) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆಗಳ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

(5) ಗ್ರೇಟರ್ ಬೆಂಗಳೂರು ಪ್ರದೇಶದೊಳಗೆ ಅಥವಾ ಬಹುಮಟ್ಟಿಗೆ ಕ್ಷೇತ್ರವು ಬರುವ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರದೇಶದಲ್ಲಿ ವಾಸಿಸುವ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರು ಮತ್ತು ರಾಜ್ಯ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಎಲ್ಲಾ ಸದಸ್ಯರು ಸಹ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸದಸ್ಯರಾಗಿರತಕ್ಕದ್ದು.

(6) ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ, ಬೆಂಗಳೂರು ಸಂಚಾರಿ ಪೊಲೀಸ್, ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಉದ್ಯಮ ನಿಯಮಿತ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಾಹಕ ಮುಖ್ಯಸ್ಥರು ಹಾಗೂ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪೌರ ಪ್ರಕಾರ್ಯಗಳನ್ನು ನಿರ್ವಹಿಸುವ ಸರ್ಕಾರದ ಯಾವುದೇ ಏಜೆನ್ಸಿ ಅಥವಾ ಇಲಾಖೆಯ ಯಾರೇ ಅಧಿಕಾರಿಯು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ವಿಶೇಷ ಆಹ್ವಾನಿತರಾಗಿರತಕ್ಕದ್ದು ಮತ್ತು ಅದರ ಸಭೆಗಳಿಗೆ ಹಾಜರಾಗಬಹದು ಆದರೆ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(7) ಉಪಪ್ರಕರಣ (3), (4) ಮತ್ತು (5)ರಲ್ಲಿ ನಿರ್ದಿಷ್ಟಪಡಿಸಲಾದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಎಲ್ಲಾ ಸದಸ್ಯರು ನಿಯಮಿಸಬಹುದಾದಂಥ ರೀತಿಯಲ್ಲಿ ಮತದಾನ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

**XXX XXX XXX**

**13. ಕಾರ್ಯಕಾರಿ ಸಮಿತಿಯ ರಚನೆ.-** (1) ಗ್ರೇಟರ್ ಬೆಂಗಳೂರು ಪ್ರಾಧಿಕಾರವು ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಅದರ ಪ್ರಕಾರ್ಯಗಳ ನಿರ್ವಹಣೆಯಲ್ಲಿ ನೆರವು ನೀಡಲು ಕಾರ್ಯಕಾರಿ ಸಮಿತಿಯನ್ನು ರಚಿಸತಕ್ಕದ್ದು. ಕಾರ್ಯಕಾರಿ ಸಮಿತಿಯು ಈ ಮುಂದಿನ ಸದ್ಯಸರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಬೆಂಗಳೂರು ಅಭಿವೃದ್ಧಿ ಮಂತ್ರಿ ಅಥವಾ ಮುಖ್ಯಮಂತ್ರಿಯವರು ನಾಮನಿರ್ದೇಶಿಸುವ ಯಾರೇ ಮಂತ್ರಿಯು ಅಧ್ಯಕ್ಷರಾಗಿರತಕ್ಕದ್ದು;

(ಬಿ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಕಾರ್ಯಕಾರಿ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(ಸಿ) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆಗಳ ಆಯುಕ್ತರು;

(ಡಿ) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ;

(ಇ) ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ;

(ಎಫ್) ಆಯುಕ್ತರು, ನಗರ ಭೂಸಾರಿಗೆ ನಿರ್ದೇಶನಾಲಯ;

(ಜಿ) ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ;

(ಎಚ್) ಮುಖ್ಯ ನಗರ ಯೋಜಕ, ಗ್ರೇಟರ್ ಬೆಂಗಳೂರು ಪ್ರಾಧಿಕಾರ;

(ಐ) ಮುಖ್ಯ ಇಂಜಿನಿಯರ್ ಗ್ರೇಟರ್ ಬೆಂಗಳೂರು ಪ್ರಾಧಿಕಾರ;

(ಜೆ) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ;

(ಕೆ) ವ್ಯವಸ್ಥಾಪಕ ನಿರ್ದೇಶಕರು, ವಿದ್ಯುತ್ ಸರಬರಾಜು ನಿಯಮಿತ;

(ಎಲ್) ಆಯುಕ್ತರು, ಬೆಂಗಳೂರು ನಗರ ಪೊಲೀಸ್;

(ಎಂ) ಮಹಾ ನಿರ್ದೇಶಕರು, ಅಗ್ನಿ ಶಾಮಕ ಸೇವೆಗಳ ಇಲಾಖೆ;

(ಎನ್) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೈಲು ಮೂಲಸೌಕರ್ಯ್ಯ ಅಭಿವೃದ್ಧಿ ಕಂಪನಿ; ಮತ್ತು

(ಒ) ಅಧ್ಯಕ್ಷರು ಅಂಥ ಕ್ಷೇತ್ರ ತಜ್ಞರು ಅಥವಾ ಇತರ ಅಧಿಕಾರಿಗಳನ್ನು ಅಂಥ ಸಮಿತಿ ಸಭೆಗಳಿಗೆ ಆಹ್ವಾನಿಸಬಹುದು, ಅವರು ವಿಶೇಷ ಆಹ್ವಾನಿತರಾಗಿ ಸಭೆಗಳಿಗೆ ಹಾಜರಾಗತಕ್ಕದ್ದು.

(2) ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ಕನಿಷ್ಠ ಎರಡು ತಿಂಗಳಿಗೊಮ್ಮೆಯಾದರೂ ಅದರ ಸಭೆಗಳನ್ನು ಕರೆಯತಕ್ಕದ್ದು.

(3) ನಿಯಮಗಳಿಗೆ ಮತ್ತು ಪ್ರಾಧಿಕಾರದ ನಿರ್ದೇಶನಕ್ಕೊಳಪಟ್ಟು ಕಾರ್ಯಕಾರಿ ಸಮಿತಿಯು, ಪ್ರಾಧಿಕಾರದ ಯಾವುದೇ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅದು ಮಾಡಬಹುದಾದ ಯಾವುದೇ ಕಾರ್ಯವನ್ನು ಮಾಡಬಹುದು.

(4) ಕಾರ್ಯಕಾರಿ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಕಾರ್ಯಕಾರಿ ಸಮಿತಿಗೆ ಸಂಬಂಧಪಟ್ಟ ಎಲ್ಲಾ ಇತರ ವಿಷಯಗಳು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

**XXX XXX XXX**

**29. ವಾರ್ಡ್ ಗಳ ಪುನರ್‌ವಿಂಗಡಣೆ.-** (1) ಪ್ರತಿ ನಗರ ಪಾಲಿಕೆ ಸದಸ್ಯರ ಚುನಾವಣೆ ಉದ್ದೇಶಗಳಿಗಾಗಿ ಕ್ಷೇತ್ರ ಪುನರ್‌ವಿಂಗಡಣೆ ಆಯೋಗದ ಶಿಫಾರಸಿನ ಮೇರೆಗೆ ಪ್ರತಿಯೊಂದು ನಗರ ಪಾಲಿಕೆಯನ್ನು
ವಾರ್ಡ್‌ಗಳನ್ನಾಗಿ ಈ ಮುಂದಿನ ರೀತಿಯಲ್ಲಿ ವಿಂಗಡಿಸತಕ್ಕದ್ದು,-

(ಎ) ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆಯೊಳಗಿನ ಪ್ರತಿಯೊಂದು ವಾರ್ಡ್‌ಗಳ ಜನಸಂಖ್ಯೆಯು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಒಂದೇ ಆಗಿರತಕ್ಕದ್ದು; ಮತ್ತು

(ಬಿ) ವಿಧಾನಸಭೆಯ ಸದಸ್ಯರ ಚುನಾವಣಾ ಕ್ಷೇತ್ರದ ವ್ಯಾಪ್ತಿಯೊಳಗೆ ವಾರ್ಡ್‌ಗಳನ್ನು ವಿಭಾಗಿಸತಕ್ಕದ್ದು ಮತ್ತು ಯಾವುದೇ ವಾರ್ಡ್‌ಗಳ ಇತರ ಚುನಾವಣಾ ಕ್ಷೇತ್ರಗಳಿಗೆ ವ್ಯಾಪಿಸತಕ್ಕದ್ದಲ್ಲ.

**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ, “ಜನಸಂಖ್ಯೆ” ಎಂದರೆ, ಹಿಂದಿನ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಪ್ರಕಟಿಸಿದ ನಗರದ ಜನಸಂಖ್ಯೆ.

(2) ಸರ್ಕಾರವು, ವಾರ್ಡ್‌ಗಳ ವಿಂಗಡಣೆ ವಿಧಾನದ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿಯಮಿಸಬಹುದಾದಂಥ ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡ ಪುನರ್‌ವಿಂಗಡಣಾ ಆಯೋಗವನ್ನು ರಚಿಸತಕ್ಕದ್ದು:

(3) ಸರ್ಕಾರವು ಆದೇಶದ ಮೂಲಕ,-

(ಎ) ಚುನಾವಣೆಗಳ ಉದ್ದೇಶಕ್ಕಾಗಿ ಪ್ರತಿ ನಗರ ಪಾಲಿಕೆಯ ವಾರ್ಡ್‌ಗಳನ್ನು ವಿಭಾಗಿಸಲಾಗಿದೆಯೇ ಎನ್ನುವುದನ್ನು:

ಪರಂತು, ಪ್ರತಿಯೊಂದು ನಗರ ಪಾಲಿಕೆಯಲ್ಲಿ ವಾರ್ಡ್ಗಳ ಸಂಖ್ಯೆಯು ನೂರ ಐವತ್ತಕ್ಕಿಂತ ಹೆಚ್ಚಿರತಕ್ಕದ್ದಲ್ಲ;

(ಬಿ) ಪ್ರತಿಯೊಂದು ವಾರ್ಡಿನ ವ್ಯಾಪ್ತಿಯನ್ನು; ಮತ್ತು

(ಸಿ) ನಗರ ಪಾಲಿಕೆಯಲ್ಲಿ;

(i) ಅನುಸೂಚಿತ ಜಾತಿಯವರಿಗೆ; ಮತ್ತು

(ii) ಅನುಸೂಚಿತ ಪಂಗಡದವರಿಗೆ,

- ಮೀಸಲಿರಿಸತಕ್ಕ ಸ್ಥಾನಗಳನ್ನು ಮತ್ತು ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡದವರಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯು, ಪಾಲಿಕೆಯಲ್ಲಿ ನೇರ ಚುನಾವಣೆ ಮೂಲಕ ತುಂಬಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ನಗರದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯು ಇರುವ ಪ್ರಮಾಣಕ್ಕೆ ಅನುಸಾರವಾಗಿ ಸಾಧ್ಯವಾದಷ್ಟು ಮಟ್ಟಿಗೆ ನಿಗದಿಪಡಿಸಲಾಗಿದೆ ಎಂಬುದನ್ನು.

(ಡಿ) ಪ್ರತಿ ನಗರ ಪಾಲಿಕೆಯಲ್ಲಿ ನೇರ ಚುನಾವಣೆಯ ಮೂಲಕ ತುಂಬಬೇಕಾದ ಪಾಲಿಕೆಯ ಸೀಟುಗಳ ಒಟ್ಟು ಸಂಖ್ಯೆಯ ಹತ್ತಿರತ್ತಿರ ಮೂರನೇ ಒಂದರಷ್ಟು ಸಂಖ್ಯೆಯ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದೆಂಬುದನ್ನು ನಿರ್ದೇಶಿಸತಕ್ಕದ್ದು:

ಪರಂತು, ಈ ಉಪಪ್ರಕರಣದಡಿಯಲ್ಲಿ ಮೀಸಲಿರಿಸಿದ ಸ್ಥಾನಗಳಲ್ಲಿ, ಅಂಥ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಎಂಬತ್ತರಷ್ಟನ್ನು 'ಎ' ಪ್ರಕರಣದಡಿಯಲ್ಲಿ ಬರುವ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಸ್ಥಾನಗಳ ಶೇಕಡಾ ಇಪ್ಪತ್ತರಷ್ಟನ್ನು 'ಬಿ' ಪ್ರವರ್ಗದಡಿಯಲ್ಲಿ ಬರುವ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು:

ಮತ್ತು ಪರಂತು, 'ಎ' ಪ್ರಕರಣದಡಿಯಲ್ಲಿ ಬರುವ ಯಾರೇ ವ್ಯಕ್ತಿಯು ಲಭ್ಯವಾಗದಿದ್ದಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು ಕೂಡ 'ಬಿ' ಪ್ರವರ್ಗದಡಿ ಬರುವ ವ್ಯಕ್ತಿಗಳಿಗಾಗಿ ರಿಕ್ತ ಮಾಡತಕ್ಕದ್ದು. ಹಾಗೆಯೇ ಇದು ವಿರುದ್ಧವಾಗತಕ್ಕದ್ದು:

ಮತ್ತೂ ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯನ್ನು, ಈ ಉಪಪ್ರಕರಣದಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲಿರಿಸಿದ ಮತ್ತು ಈ ಉಪಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಒಟ್ಟು ಸಂಖ್ಯೆಯ ಸ್ಥಾನಗಳು ಪಾಲಿಕೆಯಲ್ಲಿನ ಒಟ್ಟು ಸಂಖ್ಯೆ ಸ್ಥಾನಗಳ ಶೇಕಡ ಐವತ್ತರಷ್ಟನ್ನು ಮೀರತಕ್ಕದ್ದಲ್ಲದ ಹಾಗೆ ನಿರ್ಧರಿಸತಕ್ಕದ್ದು. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟಿರುವ ಸ್ಥಾನಗಳ ಸಂಖ್ಯೆಗೆ ಅನುಗುಣವಾಗಿ ನಗರ ಪಾಲಿಕೆಯಲ್ಲಿ ನೇರವಾಗಿ ಚುನಾಯಿತ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರಿದರೆ, ಒಟ್ಟು ಮೀಸಲಿರಿಸಿದ ಸ್ಥಾನಗಳು ಶೇಕಡಾ ಐವತ್ತರಷ್ಟನ್ನು ಮೀರದಂತೆ ಖಚಿತಪಡಿಸಿಕೊಳ್ಳಲು, ನಂತರ ಹಿಂದುಳಿದ ವರ್ಗಗಳ ಸ್ಥಾನಗಳನ್ನು ಪ್ರಮಾಣಾನುಸಾರವಾಗಿ ಕಡಿಮೆ ಮಾಡತಕ್ಕದ್ದು.

(4) ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಪ್ರತಿಯೊಂದು ವರ್ಗಕ್ಕಾಗಿ ಮೀಸಲಿರಿಸಿದ ಸ್ಥಾನಗಳಲ್ಲಿ ಶೇಕಡಾ ಐವತ್ತರಷ್ಟನ್ನು ಮೀರುವಂತಿಲ್ಲ ಹಾಗೂ ನಗರ ಪಾಲಿಕೆಯಲ್ಲಿ ನೇರ ಚುನಾವಣೆಯ ಮೂಲಕ ತುಂಬಬೇಕಾದ ಮೀಸಲೇತರ (non-reserved) ಸೀಟುಗಳಲ್ಲಿ ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು:

ಪರಂತು, (3) ಮತ್ತು (4)ನೇ ಉಪ-ಪ್ರಕರಣಗಳಲ್ಲಿ ಮೀಸಲಿರಿಸಿದ ಸ್ಥಾನಗಳನ್ನು ನಗರ ಪಾಲಿಕೆಯ ಬೇರೆಬೇರೆ ವಾರ್ಡ್ ಗಳಿಗೆ ಸರದಿಯ ಮೂಲಕ ಹಂಚಿಕೆ ಮಾಡತಕ್ಕದ್ದು.

(5) ನಗರ ಪಾಲಿಕೆಯ ಸಾರ್ವತ್ರಿಕ ಚುನಾವಣೆಯ ಉದ್ದೇಶಕ್ಕಾಗಿ ಹೊರತು ನಗರ ಪಾಲಿಕೆಯ ಸ್ಥಾಪನೆಯ ತರುವಾಯ ಮೀಸಲಾತಿಯ ಉದ್ದೇಶಕ್ಕಾಗಿ ವಾರ್ಡ್‌ಗಳ ಪುನರ್‌ವಿಂಗಡಣೆ ಅಥವಾ ವಾರ್ಡ್‌ಗಳ ಬದಲಾವಣೆಯನ್ನು ಮಾಡುವಂತಿಲ್ಲ ಹಾಗೂ ಅಂಥ ವಾರ್ಡ್‌ಗಳ ಪುನರ್‌ವಿಂಗಡಣೆ ಅಥವಾ ವಾರ್ಡ್‌ಗಳ ಬದಲಾವಣೆಯು ಅಸ್ತಿತ್ವದಲ್ಲಿರುವ ನಗರ ಪಾಲಿಕೆಗೆ ಯಾವುದೇ ರೀತಿಯಲ್ಲಿ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(6) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಒಟ್ಟಾರೆ ಮೂರನೇ ಎರಡರಷ್ಟು ಸಂಖ್ಯೆಯ ಕೌನ್ಸಿಲರುಗಳನ್ನು ಚುನಾಯಿಸಬೇಕಾಗಿರುವುದು ಅಗತ್ಯವಿರುವಾಗ ಚುನಾಯಿತರಾಗಿದ್ದಲ್ಲಿ ನಗರ ಪಾಲಿಕೆಯು ಈ ಅಧಿನಿಯಮದ ಅಡಿಯಲ್ಲಿ ಯುಕ್ತವಾಗಿ ರಚನೆಯಾಗಿದೆ ಎಂದು ಭಾವಿಸತಕ್ಕದ್ದು.

**XXX XXX XXX**

**30. ನಗರ ಪಾಲಿಕೆಯ ರಚನೆ.- ನಗರ ಪಾಲಿಕೆಯು,-**

(ಎ)ಸರ್ಕಾರವು ನಿರ್ಧರಿಸಬಹುದಾದಂತೆ ಪ್ರತಿ ವಾರ್ಡ್ ನ್ನು ಪ್ರತಿನಿಧಿಸುವ ಅಂಥ ಸಂಖ್ಯೆಯ ಚುನಾಯಿತ ಸದಸ್ಯರನ್ನು,

(ಬಿ) ಸರ್ಕಾರವು ಬೆಂಗಳೂರು ನಗರದ ನಿವಾಸಿಗಳ ಪೈಕಿಯಿಂದ, ನಗರಪಾಲಿಕೆಯ ಸದಸ್ಯರ ಶೇಕಡಾ ಹತ್ತರಷ್ಟನ್ನು ಮೀರದಂತೆ,-

(i) ಪೌರಾಡಳಿತ ಅಥವಾ ಆರೋಗ್ಯ, ನಗರ ಯೋಜನೆ ಅಥವಾ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ವಿಶೇಷ ಜ್ಞಾನ ಮತ್ತು ಅನುಭವವನ್ನು ಹೊಂದಿರುವ ಅಥವಾ;

(ii) ಸಮಾಜ ಸೇವಾ ಕಾರ್ಯಕರ್ತರಾಗಿರುವಂಥ

-ವ್ಯಕ್ತಿಗಳನ್ನು ನಾಮನಿರ್ದೇಶಿಸತಕ್ಕ ಸದಸ್ಯರನ್ನು

ಪರಂತು, (ಬಿ) ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳು ನಗರ ಪಾಲಿಕೆಯ ಸಭೆಗಳಲ್ಲಿ ಮತ ಚಲಾಯಿಸುವ ಹಕ್ಕು ಹೊಂದಿರತಕ್ಕದ್ದಲ್ಲ.

(ಸಿ) ನಗರ ಪಾಲಿಕೆಯ ಪ್ರದೇಶದೊಳಗಿನ ಕ್ಷೇತ್ರಗಳಲ್ಲಿ ಮತದಾರರಾಗಿ ನೋಂದಣಿಯಾದ ಸಂಸದರು ಮತ್ತು ನಗರ ಪಾಲಿಕೆ ಪ್ರದೇಶದಲ್ಲಿನ ರಾಜ್ಯಸಭೆಯ ಸದಸ್ಯರನ್ನು; ಮತ್ತು

(ಡಿ) ನಗರ ಪಾಲಿಕೆಯ ಪ್ರದೇಶದೊಳಗೆ ಮತದಾರರಾಗಿ ನೋಂದಾಯಿಸಿದ ರಾಜ್ಯ ವಿಧಾನಸಭೆಯ ಸದಸ್ಯರನ್ನು ಮತ್ತು ವಿಧಾನಪರಿಷತ್ತಿನ ಸದಸ್ಯರನ್ನು,

-ಒಳಗೊಂಡಿರತಕ್ಕದ್ದು.

**33. ನಗರಪಾಲಿಕೆ ಸದಸ್ಯರ ಪದಾವಧಿ.-** (1)ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ನಗರಪಾಲಿಕೆ ಸದಸ್ಯರುಗಳ ಪದಾವಧಿಯು,-

(i) ಸಾರ್ವತ್ರಿಕ ಚುನಾವಣೆಯಲ್ಲಿ ನೇರವಾಗಿ ಚುನಾಯಿತರಾದವರಿಗೆ ಐದು ವರ್ಷಗಳಾಗಿರತಕ್ಕದ್ದು;

(ii) ಸರ್ಕಾರದಿಂದ ನಾಮನಿರ್ದೇಶನಗೊಂಡವರಿಗೆ ಸರ್ಕಾರದ ಇಚ್ಛೆಗೊಳಪಟ್ಟು ನಗರಪಾಲಿಕೆ ಸದಸ್ಯರ ಸಹ-ವ್ಯಾಪ್ತಿಯಲ್ಲಿ ಐದು ವರ್ಷಗಳಾಗಿರತಕ್ಕದ್ದು;

(2) ನಗರಪಾಲಿಕೆ ಸದಸ್ಯರ ಪದಾವಧಿಯು, ನಗರ ಪಾಲಿಕೆಯ ಮೊದಲ ಸಭೆಗಾಗಿ ನಿಗದಿಪಡಿಸಿದ ದಿನಾಂಕದಿಂದ ಪ್ರಾರಂಭವಾಗತಕ್ಕದ್ದು.

(3) ಯಾವುದೇ ಆಕಸ್ಮಿಕ ಖಾಲಿ ಸ್ಥಾನವು ಉಂಟಾದಲ್ಲಿ, ಸಾಧ್ಯವಾದಷ್ಟು ಬೇಗನೆ ವ್ಯಕ್ತಿಯ ಚುನಾವಣೆಯ ಮೂಲಕ ಅದನ್ನು ರಿಕ್ತ ಮಾಡತಕ್ಕದ್ದು. ಹಾಗೆ ಚುನಾಯಿತನಾದ ವ್ಯಕ್ತಿಯು ಆತನು ಯಾವ ಖಾಲಿ ಸ್ಥಾನಕ್ಕೆ ಚುನಾಯಿತನಾಗಿರುವನೋ ಆ ಉಳಿದ ಅವಧಿಗೆ ಆ ಹುದ್ದೆಯನ್ನು ಹೊಂದಿರತಕ್ಕದ್ದು.

ಪರಂತು, ನಗರಪಾಲಿಕೆ ಸದಸ್ಯರ ಪದಾವಧಿಯು ಮುಕ್ತಾಯವಾಗುವುದಕ್ಕೆ ಆರು ತಿಂಗಳೊಳಗೆ ಖಾಲಿ ಸ್ಥಾನವು ಉಂಟಾದಲ್ಲಿ ಆ ಖಾಲಿ ಸ್ಥಾನವನ್ನು ರಿಕ್ತ ಮಾಡಲು ಚುನಾವಣೆ ನಡೆಸತಕ್ಕದ್ದಲ್ಲ.

**XXX XXX XXX**

**95. ವಿಧಾನಸಭಾ ಕ್ಷೇತ್ರ ಮಟ್ಟದ ಸಮಾಲೋಚನೆ ಮತ್ತು ಸಮನ್ವಯ ಸಮಿತಿ.-** (1) ಸರ್ಕಾರವು, ವಿಧಾನಸಭಾ ಕ್ಷೇತ್ರ ಮಟ್ಟದ ಸಮಾಲೋಚನಾ ಮತ್ತು ಸಮನ್ವಯ ಸಮಿತಿಯನ್ನು ರಚಿಸತಕ್ಕದ್ದು, ಅದು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಪ್ರದೇಶದ ವಿಧಾನಸಭೆಯ ಸದಸ್ಯನು ಅಧ್ಯಕ್ಷನಾಗಿರತಕ್ಕದ್ದು;

(ಬಿ) ಪ್ರದೇಶದ ವಿಧಾನ ಪರಿಷತ್ತಿನ ಸದಸ್ಯರು;

(ಸಿ) ಪ್ರದೇಶವನ್ನು ಪ್ರತಿನಿಧಿಸುವ ನಗರ ಪಾಲಿಕೆ ಸದಸ್ಯರು; ಮತ್ತು

(ಡಿ) ಪ್ರದೇಶದ ಇತರ ಇಲಾಖೆಗಳು ಮತ್ತು ಏಜೆನ್ಸಿಗಳಿಂದ ಅಂಥ ಅಧಿಕಾರಿಗಳನ್ನು ಶಾಶ್ವತ ಸದಸ್ಯರನ್ನಾಗಿ ಆಹ್ವಾನಿಸತಕ್ಕದ್ದು.

(2) ಸಮಿತಿಯು ತಿಂಗಳಲ್ಲಿ ಒಂದು ಬಾರಿಯಾದರೂ ಸಭೆ ಸೇರತಕ್ಕದ್ದು

**XXX XXX XXX**

**241. ಅಧಿಭೋಗ ಪ್ರಮಾಣಪತ್ರದ ಮಂಜೂರಾತಿ.-** (1) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಕಟ್ಟಡವನ್ನು ನಿರ್ಮಿಸಿದ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನಿರ್ಮಾಣವನ್ನು ಪೂರ್ಣಗೊಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಧಿಭೋಗ ಪ್ರಮಾಣಪತ್ರವನ್ನು ಮಂಜೂರು ಮಾಡುವಂತೆ ಕೋರಿ ಆಯುಕ್ತರಿಗೆ ಅರ್ಜಿಸಲ್ಲಿಸತಕ್ಕದ್ದು.

(2) ಅಧಿಭೋಗ ಪ್ರಮಾಣಪತ್ರವನ್ನು ಮಂಜೂರು ಮಾಡುವಂತೆ ಕೋರಿ ಸಲ್ಲಿಸುವ ಅರ್ಜಿಯನ್ನು, ಮಾನ್ಯತೆ ಪಡೆದ ವಾಸ್ತುಶಿಲ್ಪಿ ಅಥವಾ ಇಂಜಿನಿಯರ್ ಅವರು ಕಟ್ಟಡವನ್ನು ಮಂಜೂರಾದ ನಕ್ಷೆಗಳಿಗೆ ಅನುಗುಣವಾಗಿ ನಿರ್ಮಿಸಲಾಗಿದೆ ಎಂಬುದನ್ನು ಕಟ್ಟಡದ ನಿರ್ಮಿತ ಮಹಡಿವಾರು ನಕ್ಷೆಗಳು ಮತ್ತು ಕಾಮಗಾರಿ ಪೂರ್ಣಗೊಂಡ ಕುರಿತ ವರದಿಯೊಂದಿಗೆ ಯುಕ್ತವಾಗಿ ಪ್ರಮಾಣೀಕರಿಸತಕ್ಕದ್ದು;

(3) ಅಧಿಭೋಗ ಪ್ರಮಾಣಪತ್ರದ ಮಂಜೂರಾತಿಗಾಗಿ ಅರ್ಜಿಯನ್ನು ಸ್ವೀಕರಿಸಿದ ನಂತರ, ಅಪರ ಮುಖ್ಯ ನಗರ ಯೋಜಕರು ಸ್ವತಃ ಅಥವಾ ಅಗತ್ಯಬಿದ್ದರೆ, ತಮ್ಮ ಅಧೀನ ಅಧಿಕಾರಿಗಳ ಮೂಲಕ ಅಂಥ ಕಟ್ಟಡದ ಭೌತಿಕ ತಪಾಸಣೆಯನ್ನು ಕೈಗೊಳ್ಳತಕ್ಕದ್ದು. ಅಪರ ಮುಖ್ಯ ನಗರ ಯೋಜಕರ ಪರಿಶೀಲನೆ ಮತ್ತು ಸಲಹೆಯ ಮೇರೆಗೆ, ಆಯುಕ್ತನು ಅಧಿಭೋಗ ಪ್ರಮಾಣಪತ್ರದ ಅರ್ಜಿಯನ್ನು ಮಂಜೂರು ಮಾಡಬಹುದು ಅಥವಾ ತಿರಸ್ಕರಿಸಬಹುದು.

(4) ವಾಸ್ತುಶಿಲ್ಪಿ ಅಥವಾ ಇಂಜಿನಿಯರ್ ನೀಡಿದ ಕಾಮಗಾರಿ ಪೂರ್ಣಗೊಂಡ ಕುರಿತ ವರದಿಯು ಮಂಜೂರಾದ ನಕ್ಷೆಗಳು ಮತ್ತು ಕಟ್ಟಡದ ಉಪ-ವಿಧಿಗಳಿಗೆ ಅನುಗುಣವಾಗಿಲ್ಲದಿದ್ದರೆ, ಆಯುಕ್ತನು ಸಂಬಂಧಪಟ್ಟ ವಾಸ್ತುಶಿಲ್ಪಿ ಅಥವಾ ಇಂಜಿನಿಯರ್ ರವರ ಅಹವಾಲನ್ನು ಆಲಿಸಿದ ತರುವಾಯ, ಅಂಥ ದಂಡವನ್ನು ವಿಧಿಸಬಹುದು ಅಥವಾ ಪರವಾನಿಗೆಯನ್ನು ಅಮಾನತ್ತಿನಲ್ಲಿಡಬಹುದು ಅಥವಾ ರದ್ದುಗೊಳಿಸಬಹುದು. ಮಂಜೂರಾದ ನಕ್ಷೆಗನುಸಾರವಾಗಿ ಅಥವಾ ಉಪವಿಧಿಗಳಲ್ಲಿ ಮನ್ನಿಸಬಹುದಾದ ಪರಿಮಿತಿಗಳೊಳಗೆ ಕಟ್ಟಡವನ್ನು ನಿರ್ಮಿಸಲಾಗಿದ್ದಲ್ಲಿ, ಆಯುಕ್ತನು ಅಧಿಭೋಗ ಪ್ರಮಾಣಪತ್ರವನ್ನು ಮಂಜೂರು ಮಾಡಬಹುದು:

ಪರಂತು, ಮನ್ನಿಸಬಹುದಾದ ಪರಿಮಿತಿಗಳು ಅನುಮತಿಸಬಹುದಾದ ಪರಿಮಿತಿಗಳ ಶೇಕಡಾ 10 ಕ್ಕಿಂತ ಹೆಚ್ಚಿರಬಾರದು ಹಾಗೂ ಈ ಅಧ್ಯಾಯದಲ್ಲಿ ಅಧಿಸೂಚಿಸಲಾದಂತೆ ಸಂಯುಕ್ತ ಶುಲ್ಕವನ್ನು ಪಾಲಿಕೆಗೆ ಪಾವತಿಸತಕ್ಕದ್ದು.

(5) ಯಾರೇ ವ್ಯಕ್ತಿಯು,-

(ಎ) ಈ ಪರವಾಗಿ ಆಯುಕ್ತನಿಂದ ಅನುಮತಿಯನ್ನು ಪಡೆಯುವವರೆಗೆ ಅಥವಾ; ಅಥವಾ

(ಬಿ) ಆಯುಕ್ತನು ಕಾಮಗಾರಿ ಪೂರ್ಣಗೊಂಡ ನೋಟೀಸನ್ನು ಪಡೆದ ತರುವಾಯ ಮೂವತ್ತು ದಿನಗಳವರೆಗೆ ಸದರಿ ಅನುಮತಿಗೆ ತನ್ನ ನಿರಾಕರಣೆಯನ್ನು ತಿಳಿಸಲು ವಿಫಲನಾದರೆ;

- ಅಂಥ ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗವನ್ನು ಅಧಿಭೋಗಿಸತಕ್ಕದ್ದಲ್ಲ ಅಥವಾ ಅಧಿಭೋಗಿಸಲು ಆತನಿಗೆ ಅನುಮತಿಸತಕ್ಕದ್ದಲ್ಲ ಅಥವಾ ಆತನು ಯಾವುದೇ ಕಾಮಗಾರಿಯಿಂದ ಬಾಧಿತವಾದ ಕಟ್ಟಡವನ್ನು ಅಥವಾ ಅದರ ಭಾಗವನ್ನು ಬಳಸತಕ್ಕದ್ದಲ್ಲ ಅಥವಾ ಆತನಿಗೆ ಬಳಸಲು ಅನುಮತಿ ನೀಡತಕ್ಕದ್ದಲ್ಲ.

(6) ಈ ಅಧ್ಯಾಯದ ಅಡಿಯಲ್ಲಿ ಉಲ್ಲಂಘನೆಯಾಗಿದೆ ಎಂದು ಆಯುಕ್ತರ ಗಮನಕ್ಕೆ ತಂದರೆ ಆಯುಕ್ತನು ಯಾವುದೇ ಸಮಯದಲ್ಲಿ ನೀಡಲಾದ ಅಧಿಭೋಗ ಪ್ರಮಾಣಪತ್ರವನ್ನು ಹಿಂಪಡೆಯಬಹುದು, ಅಮಾನತಿನಲ್ಲಿಡಬಹುದು ಅಥವಾ ರದ್ದುಗೊಳಿಸಬಹುದು.

(7) ಸರ್ಕಾರವು, ಅಧಿಭೋಗ ಪ್ರಮಾಣಪತ್ರವನ್ನು ಪಡೆಯುವುದರಿಂದ ವಿನಾಯಿತಿ ನೀಡಬಹುದಾದ ಕಟ್ಟಡದ ಪ್ರವರ್ಗವನ್ನು ಅಧಿಸೂಚಿಸಬಹುದು.

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**EIGHTH SESSION**

# THE GREATER BENGALURU GOVERNANCE (SECOND AMENDMENT) BILL, 2025

## (LA Bill No. 81 of 2025)

A Bill further to amend the Greater Bengaluru Governance Act, 2024 (Karnataka Act No. 36 of 2025).

Whereas it is expedient further to amend the Greater Bengaluru Governance Act, 2024 (Karnataka Act No. 36 of 2025) for the purposes hereinafter appearing;

Be it enacted by the Karnataka State Legislature in the seventy sixth year of the Republic of India, as follows:-

**1. Short title and commencement.-** (1) This Act may be called the Greater Bengaluru Governance (Second Amendment) Act, 2025.

(2) It shall come into force at once.

**2. Amendment of section 9.-** In the Greater Bengaluru Governance Act, 2024 (Karnataka Act 36 of 2025) (hereinafter referred to as the Principal Act), in section 9,-

(i) in sub-section (3), after clause (d), the following shall be inserted, namely:-

“(d-1) The Chief Secretary to Government – Ex-officio Member;

(d-2) The Additional Chief Secretary to Government, Urban Development Department – Ex-officio Member;

(d-3) The Additional Chief Secretary/Principal Secretary to Government, Finance Department – Ex-officio Member;”

(ii) for sub-section (5), the following shall be substituted, namely:-

“(5) The following shall also be members of the Greater Bengaluru Authority, namely:-

(i) All elected member of the Loksabha and the State Legislative Assembly whose constituency or part of constituency lie within area of the Greater Bengaluru Authority;

(ii) All elected members of the Rajyasabha and the State Legislative Council who are elected by the members of the Karnataka Legislative Assembly and who reside within the area of the Greater Bengaluru Authority;

(iii) All elected members of the State Legislative Council elected from Local Authorities Constituency or Graduate Constituency or Teacher Constituency whose constituency or part of constituency lie within area of the Greater Bengaluru Authority;

(iv) All nominated members of the Rajyasabha and the State Legislative Council who have their name in the electoral roll within area of the Greater Bengaluru Authority."

**3. Amendment of section 13.-** In the Principal Act, in section 13, in sub-section (1), after clause (a), the following shall be inserted, namely:-

"(a-1) The Additional Chief Secretary to Government, Urban Development Department;"

**4. Amendment of section 29.-** In the Principal Act, in section 29, after sub-section (5), the following proviso shall be inserted, namely:-

"Provided that, de-limitation shall be made for the newly included local area within a period of three months.

Provided further that, new de-limitation process shall be conducted after every census, before next General election to the City Corporation, if census results are available at least six months before the next General election to the City Corporation."

**5. Amendment of section 30.-** In the Principal Act, in section 30, after clause (d), the following shall be inserted, namely:-

"(e) the Government shall nominate at least one person, for every 20000 population, ordinarily resident in such local area which is included in the Greater Bengaluru Area who shall be an additional councillor for the particular City Corporation until election is conducted to that local area:

Provided that, such nominated person shall not have the power to vote in the City Corporation."

**6. Amendment of section 33.-** In the Principal Act, in section 33, after sub-section (3), the following shall be inserted, namely:-

"(4) An election shall be conducted for the newly included local area after de-limitation, not later than six months from the date of inclusion of that area. The person so elected shall hold office only so long as the remaining period of that City Corporation to which that new local area is included:

Provided that no election shall be conducted for the newly included local area if the term of office of the Councillors of that City Corporation expires within a period of six months."

**7. Amendment of section 95.-** In the Principal Act, in section 95, in sub-section (1), after clause (d), the following shall be inserted, namely:-

"(e) the nominated member of a local area included in the Greater Bengaluru Area, who is nominated as member of the respective City Corporation as per clause (e) of

section 30, shall deemed to be nominated member of the respective Assembly Constituency Level Consultative and Co-ordination Committee until his tenure."

**8. Amendment of section 241.-** In the Principal Act, in section 241, in sub-section (4),-

(i) for the words "the condonable limits, as may be specified in the bye-laws", the words "the condonable limits and the compounding fee as may be specified in the bye-laws with approval of the Government", shall be substituted; and

(ii) the proviso shall be omitted.

## STATEMENT OF OBJECTS AND REASONS

It is considered necessary further to amend the Greater Bengaluru Governance Act, 2024 (Karnataka Act No. 36 of 2025) to,-

(i) include the members of the Lok Sabha, Rajya Sabha, State Legislative Assembly and State Legislative Council as members of the Greater Bengaluru Authority;

(ii) include the Chief Secretary to the Government, the Additional Chief Secretary to Government Urban Development Department and the Additional Chief Secretary to Government/the Principal Secretary to Government, Finance Department as ex-officio members of the Greater Bengaluru Authority;

(iii) include the Additional Chief Secretary to Government, Urban Development Department as a member of the Executive Committee;

(iv) provide for the re-division of wards in respect of newly incorporated local areas to be carried out within a specified period;

(v) bring clarity to the conduct of elections for newly added local areas to the Greater Bengaluru region; and

(vi) consider the members nominated under section 30 (e) of the Act as members of the Co-ordination Committee.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**D. K. SHIVAKUMAR**
Deputy Chief Minister

**M.K. VISHALAKSHI**
Secretary
Karnataka Legislative Assembly

**EXTRACT FROM THE GREATER BENGALURU GOVERNANCE ACT, 2024**
**(KARNATAKA ACT NO. 36 OF 2025)**

**X XX XXX XX X**

**9. Constitution of the Greater Bengaluru Authority.-** (1) As soon as may be after the date of commencement of this Act not later than one hundred twenty days from the said date, the Government shall, by notification, constitute an Authority for the Greater Bengaluru Area called the Greater Bengaluru Authority.

(2) The Greater Bengaluru Authority shall be a body corporate and shall have perpetual succession and common seal with power to acquire, hold and dispose of property and to contract and may, by its name, sue and be sued.

(3) The Greater Bengaluru Authority shall consist of the following members, namely:-

(a) The Chief Minister who shall be the Ex-officio Chairperson;

(b) The Minister in charge of Bengaluru Development, who shall be the Ex-officio Vice-Chairperson;

(c) The Ministers in the State Government representing the legislature constituencies in the Greater Bengaluru Area - Ex-officio Members;

(d) The minister in-charge of Urban Development – Ex-officio Member.

(e) The Chief Commissioner of Greater Bengaluru Authority, who shall be the Ex-officio Member Secretary;

(f) The Mayors of the City Corporations within the Greater Bengaluru Area - Ex-officio Members;

(g) The Commissioner, Bangalore Development Authority – Ex-officio Member;

(h) The Chairman, Bangalore Water Supply and Sewerage Board– Exofficio Member;

(i) The Managing Director, Bangalore Metropolitan Transport Corporation– Ex-officio Member;

(j) The Managing Director, Bangalore Metro Rail Corporation– Ex-officio Member;

(k) The Managing Director, Bangalore Electricity Supply Company Limited– Ex-officio Member;

(l) Deputy Commissioners of the jurisdictional revenue districts;

(m) The Commissioner of Police, Bengaluru City – Ex-officio Member;

(n) The Superintendents of Police having jurisdiction in part or full in any of the City Corporations – Ex-officio Member;

(o) The Chief Executive Officer, Bengaluru Metropolitan Land Transport Authority– Ex-officio Member;

(p) The Managing Director, Bengaluru Solid Waste Management Limited– Ex-officio Member;

(q) The Chief Town planner, the Greater Bengaluru Authority– Ex-officio Member;

(r) Engineer in Chief, the Greater Bengaluru Authority– Ex-officio Member;

(s) The Director, Karnataka State Fire and Emergency Services – Ex-officio Member;

(t) The Commissioner, Directorate of Urban Land Transport – Ex-officio Member; and

(u) The Metropolitan Commissioner, Bengaluru Metropolitan Region Development Aurthority – Ex-officio Member.

(4) The Commissioners of the City Corporations in the Greater Bengaluru Area shall be ex-officio members of the Greater Bengaluru Authority.

(5) All the elected members of the Lokasabha and Rajyasabha and the State Legislative Assembly and Legislative Council, whose constituencies lie within or substantially within the Greater Bengaluru Area and who resides in that area of the Greater Bengaluru Authority, shall also be members of the Greater Bengaluru Authority.

(6) The executive heads of Bengaluru Metropolitan Land Transport Authority, Bangalore Traffic Police, Karnataka Rail Infrastructure Development Enterprises Limited, Karnataka Tank Conservation and Development Authority, Karnataka State Disaster Management Authority and the Karnataka Slum Development Board and any other officer of any agency or department of the Government discharging municipal functions in the Greater Bengaluru Area as the Government may specify, shall be special invitees to the Greater Bengaluru Authority and may attend the meetings but shall not have the right to vote.

(7) All the Members of the Greater Bengaluru Authority specified in sub-sections (3), (4) and (5) shall have the right to vote, in the manner as may be prescribed

**X XX XXX XX X**

**13. Constitution of Executive Committee.-** (1) The Greater Bengaluru Authority shall constitute an Executive Committee to assist in the discharge of its functions in the manner as may be specified in the regulations. The Executive Committee shall consist of the following members, namely:-

(a) The Minister in charge of Bengaluru Development or any Minister nominated by the Chief Minister, who shall be the Chairperson;

(b) The Chief Commissioner of the Greater Bengaluru Authority, who shall be the Member Secretary of the executive committee;

(c) The Commissioners of the City Corporations in the Greater Bengaluru Area;

(d) The Commissioner, Bangalore Development Authority;

(e) The Metropolitan Commissioner, Bangalore Metropolitan Region Development Authority;

(f) The Commissioner, Directorate of Urban Land Transport;

(g) The Chairman, Bangalore Water Supply and Sewerage Board;

(h) Chief Town Planner, Greater Bengaluru Authority;

(i) Engineer-in-Chief, Greater Bengaluru Authority;

(j) Managing Director Bengaluru Metro Rail Corporation Limited;

(k) Managing Director Bengaluru Electricity Supply Company Limited;

(l) Commissioner, Bengaluru City Police;

(m) Director General, Department of Fire Services;

(n) Managing Director, Karnataka Rail Infrastructure Development Company; and

(o) The Chairperson may invite such domain experts or other officers for such Committee meetings who shall attend the meetings as Special Invitees.

(2) The Chairperson of the Executive Committee shall convene its meetings in such a manner that at least one meeting is held in two months. (3) Subject to the rules, and to the direction of the Authority, the Executive Committee shall exercise any powers and do any act or thing which may be exercised or done by the Authority.

(3) The procedure to be followed by the Executive Committee and all other matters relating to the Executive Committee shall be such as may be specified by regulations.

**X XX XXX XX X**

**29. Delimitation of Wards.-** (1) For the purposes of election of councillors, each City Corporation shall be divided in to wards on the recommendation of the Delimitation Commission, in such manner that,-

(a) the population of each of the wards within the City Corporation in the Greater Bengaluru Area shall, as far as practicable, be the same; and

(b) Wards shall be divided within the constituency of a member of Legislative Assembly and no wards shall be spread over to multiple constituencies.

Explanation: For the purpose of this section, population means the population of the City published as per the relevant figures of the preceding census.

(2) The Government shall constitute a delimitation commission consisting of such number of persons as may be prescribed, to recommend to the Government regarding the manner of division of wards.

(3) The Government shall by order determine,-

(a) the wards into which each of the City Corporations, for the purpose of its elections, be divided:

Provided that the number of wards in each City Corporation shall not be more than one hundred and fifty;

(b) the extent of each ward; and

(c) seats shall be reserved in a City Corporation,-

(i) for the Scheduled Castes; and

(ii) for the Scheduled Tribes.

- and the number of seats so reserved for Scheduled Castes and Scheduled Tribes shall bear as nearly as may be, the same proportion to the total number of seats to be filled by direct election in each City Corporation as the population of the Scheduled Castes and of the Scheduled Tribes, respectively, in the said City Corporation bears to the total population of that Corporation.

(d) Such number of seats which shall as nearly as may be, one third of the total number of seats to be filled by direct election in each City Corporation shall be reserved for persons belonging to the Backward Classes.

Provided that, out of the seats reserved under this sub-section, eighty percent of the total number of such seats shall be reserved for the persons falling under category "A" and the remaining twenty percent of the seats shall be reserved for the persons falling under category "B".

Provided further that, if no person falling under category "A" is available, the seats reserved for that category shall also be filled by the persons falling under category "B" and vice-versa.

Provided also that then number of seats so reserved for the Backward Classes under this sub-section shall be so determined, that the total number of seats reserved for the Scheduled Castes and Scheduled Tribes and the Backward Classes under this sub-section shall not exceed fifty percent of the total number of seats in the City Corporation. In case, as per the number of seats reserved for the Scheduled Castes, the Scheduled Tribes and the Backward Classes together exceeds fifty percent of the total number of directly elected seats in the City Corporation, then the seats for the Backward Classes shall be proportionately reduced to ensure that the total reserved seats do not exceed fifty percent.

(4) Not more than fifty percent of the seats reserved for each category of persons belonging to Scheduled Castes, Scheduled Tribes and Backward Classes as well as the

non-reserved seats to be filled by direct election in a City Corporation, shall be reserved for women:

Provided that, the seats reserved in sub-sections (3) and (4) shall be allotted by rotations to different wards of the elections of the City Corporation.

(5) No de-limitation of wards or change of wards for the purpose of reservation shall be made in the City Corporation after its constitution, except for the purpose of general election to that City Corporation and no such delimitation or change of wards shall, in any manner, affect the existing City Corporation.

(6) Notwithstanding anything contained in this Act, where two thirds of the total number of Councillors required to be elected have been elected, the City Corporation shall be deemed to have been duly constituted under this Act.

**X XX XXX XX X**

**30. Constitution of the City Corporation**.- The City Corporation shall consist of,-

(a) Such number of elected Councillors representing each ward determined by the Government;

(b) the Government shall nominate such members from the residents of the City of Bengaluru and such members shall not exceed ten percent of the Councillors:-

(i) who are persons having special knowledge and experience in municipal administration or matters relating to health, town planning or education; or

(ii) who are social workers:

Provided that, the persons referred to in clause (b) shall not have right to vote in the meetings of the City Corporation.

(c) the Members of the House of people whose constituencies are within the area of the City Corporation and the Members of the Council of States who are registered as voters in the City Corporation; and

(d) the Members of Legislative Assembly whose constituencies are within the area of the City Corporation and the Members of Legislative Council who are registered as voters in the City Corporation have been duly constituted under this Act.

**X XX XXX XX X**

**33. Term of office of Councillors.-** (1) Save as otherwise provided in this Act, the term of office of Councillors,-

(i) directly elected at a general election shall be five years;

(ii) nominated by the Government shall, subject to the pleasure of the Government, be, co-extensive with the term of the councillors, five years.

(2) The term of office of the Councillors shall commence on the date appointed for the first meeting of the City Corporation.

(3) If any casual vacancy occurs it shall be filled, as soon as may be, by the election of a person thereto. The person so elected shall hold office only so long as the person in whose place he is elected would have held had the vacancy not occurred:

Provided that, no election to fill a casual vacancy shall be held if the vacancy occurs within six months before the expiry by efflux of time of the term of office of the Councillors.

**X XX XXX XX X**

**95. Assembly Constituency Level Consultative and Co–ordination Committee.-** (1) The Government shall constitute Assembly Constituency level Consultative and Co–ordination Committee, with the following members;

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(a) The member of the Legislative Assembly of the area as the Chair Person;

(b) The members of the Legislative Council of the area;

(c) The Councillors representing the area; and

(d) Invite such officers of the area from the other departments and agencies, as permanent members.

(2) The Committee shall meet not less than once in a month.

**X XX XXX XX X**

**241. Grant of Occupancy certificate.–** (1) Every person, who has constructed the building in accordance with the provisions of this Act, shall apply for grant of Occupancy Certificate to the Commissioner, within thirty days from the date of completion of such construction.

(2) An application for grant of occupancy certificate shall be duly certified by an empanelled architect or engineer along with the as-built floor plans and completion report of the building, that the building has been constructed in accordance with the sanctioned plans.

(3) Upon receiving the application for grant of occupancy certificate, the Additional Chief Town Planner by self or officers sub-ordinate to him as necessary, shall undertake such physical inspection of the building. On the verification and advice of the Additional Chief Town Planner, the Commissioner may grant or reject the application for occupancy certificate.

(4) If the completion report issued by the architect or engineer is not in conformity with the sanctioned plans and building bye-laws, the Commissioner may upon hearing the concerned architect or engineer, levy such penalty or suspend or cancel the licence. The occupancy certificate may be granted by the Commissioner, if the building is constructed in accordance with the sanctioned plan or within the condonable limits, as may be specified in the bye-laws.

Provided that the condonable limits shall not be more than ten percent of the permissible limits, and also the compounding fee as notified under this chapter shall be paid to the Corporation.

(5) No person shall occupy or permit to be occupied any such building, or part of the building or use or permit to be used the building or part thereof affected by any work, until,-

(a) permission has been received from the Commissioner in this behalf; or

(b) the Commissioner has failed for thirty days after receipt of the notice of completion to intimate his refusal of the said permission.

(6) The Commissioner may at any time withdraw, suspend or cancel the Occupancy certificate issued, if it is brought to the notice of the Commissioner that there has been breach committed under this Chapter.

(7) The Government may notify the category of building which shall be exempted from obtaining occupancy certificate.

**X XX XXX XX X**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು